ತಾರೀಖು 20ನೇ ನವಂಬರ್ 1902.

ನಂ. ರೆ. 2272, ಸ॥ 1894ನೇ ಇಸವಿಯ VIIನೇ ನಂಬರ್ ಮೈಸೂರು ಲ್ಯಾಂಡ್ ಅಸೈನ್‌ಮೆಂಟ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸಾರ್ವಕಾರ ಕೆಲಸಕ್ಕೆ ಅಂದರೆ, ಚಾಮರಾಜೇಂದ್ರ ರಿಜರ್ವಾಯಿರಿನ ರಕ್ಷಣಾರ್ಥವಾಗಿ ಬೇಕಾಗಿರುತ್ತವೆ. ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್, ಯವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ವಿಶೇಷತಃ ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಪಾರ್ಸಲ್ ನಂ.	ಖಾನೇಷುಮಾರಿ ನಂ.	ತಾಲ್ಲೂಕು.	ಗ್ರಾಮ.	ಮಾಲೀಕರ ಹೆಸರು.	ವಿಸ್ತೀರ್ಣ ಗಜಗಳು.	
					ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.
1	7	ಚಿಕ್ಕಬಳ್ಳಾಪುರ.	ಕಾಕೊಳು.	ಲಿಂಗಮ್ಮ	4	12
2	11			ಗೌರಮ್ಮ	10	5
3	16			ಚಿಕ್ಕೆಗೌಡ	7	16
4	17			ನರಸಿಂಣ	18	5
5	24			ಮಲ್ಲ	12	12
6	33			ನರಸಂಣ	12	12
7	34			ಬಾಲಪ್ಪಯ್ಯ	30	70
8	60			ನರಿಮೂರ	16	6
9	63			ಬುಡ್ಡ	12	5
10	72			ನರಸಂಣ	20	10
11	93			ವೈದ್ಯ ವೆಂಕಾಪಂಡಿತರು ಮತ್ತು 3 ಜನ ಇತರರು ...	22	22
12	109ಎ			ನರಸಂಣ	165	25
	113					
13	110			ನಾಗ	12	18
14	111			ನರಸಂಣ	32	14
15	112			ನಂಜಪ್ಪ ಮತ್ತು ಗೌರಮ್ಮ ಜಂಟಿ	20	23

ತಾರೀಖು 22ನೇ ಡಿಸೆಂಬರ್ 1902.

ನಂ. ರೆ. 2737, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಾದ ಮೆ॥ ಎಫ್. ಇ. ಸಿ. ಕಾರ್ ಯವರಿಗೆ 1903ನೇ ಜನವರಿ 9ನೇ ತಾರೀಖಿನಾರಭ್ಯ ಮತ್ತು ಕ್ರಿಸ್ತಮಸ್ ಮತ್ತು ಪಟ್ಟಣ ಭಿಷೇಕೋತ್ಸವದ ರಜಾ ದಿನಗಳೊಡನೆ ಐದು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಚಿಕ್ಕಬಳ್ಳಾಪುರದ ಸಬ್ ಡಿವೀಜ್ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಸೈಯದ್ ಹಮೀದ್ ಹುಸೇನ್ ಯವರು, ಮೆ॥ ಕಾರ್ ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗು ತರೀಕು ನೊಕರರ್ಯಾಡಲ್ಪಟ್ಟಿರುತ್ತಾರೆ.

ತಾರೀಖು 23ನೇ ಡಿಸೆಂಬರ್ 1902.

ನಂ. ರೆ. 2744—ರೆ. ಫೈ. 121–96, ಮೈಸೂರು ಡಿಸ್ಟ್ರಿಕ್ಟಿನ ಆಫೀಷಿಯಟಿಂಗ್ ಡೆಪ್ಯುಟಿ ಕಮೀಷನರಾದ ಮೆ॥ ಎಚ್. ರಾಮಾನುಜಯ್ಯಂಗಾರ್ಯರಿಗೆ 1902ನೇ ಅಕ್ಟೋಬರ್ 28ನೇ ಮಾರ್ಕ್ಕಂ ರೆ. 1820—ರೆ. ಫೈ. 121–96ನೇ ನಂಬರ್ ಗವರ್ನ್ಮೆಂಟಿನ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 2 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ತಾರೀಖು 23ನೇ ಡಿಸೆಂಬರ್ 1902.

ನಂ. ರೆ. 2750–ರೆ ಫೈ. 42–1901, ಪ್ರೊಬೇಷನರಿ ಅಸಿಸ್ಟೆಂಟ್ ರಸಾಯನ ಶಾಸ್ತ್ರಜ್ಞರಾದ ಮೆ॥ ಎ. ಕೆ. ಯಜ್ಞನಾರಾಯಣ ಅಯ್ಯರ್‌ಯವರಿಗೆ 1902ನೇ ಅಕ್ಟೋಬರ್ 13ನೇ ಮಾರ್ಕ್ಕಂ 1848—ರೆ. ಫೈ. 42–1901ನೇ ನಂಬರ್ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ ತಲಬಿಲ್ಲದ 1 ತಿಂಗಳು 22 ದಿನಗಳ ಎಕ್‌ಸ್ಟ್ರಾ ಆರ್ಡಿನರಿ ರಜಾ ಇನ್ನೂ 2 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಎಲ್. ಅನಂತಸ್ವಾಮಿರಾವ್,

ಫಾರ್ ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನ್‌ಮೆಂಟ್ ಸೆಕ್ರಿಟರಿ.

ಫಾರೆಸ್ಟ್.

ಇಸ್ತಿಹಾರ್ನ್ಮೆ ಮಾ.

ತಾರೀಖು 22ನೇ ಡಿಸೆಂಬರ್ 1902.

ನಂ. 421—3483, ಕಡೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್ವೇಟರಾದ ಮೆ॥ ಎಂ. ಜಿ. ರಾಮರಾಯರಿಗೆ 1902ನೇ ಡಿಸೆಂಬರ್ 9ನೇ ಮಾರ್ಕ್ಕಂ 399–3147ನೇ ನಂಬರ್ ಇಸ್ತಿಹಾರ್ನ್ಮೆಯಲ್ಲಿ ಕೊಟ್ಟಿದ್ದ $1\frac{1}{2}$ ತಿಂಗಳುಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಇಲಾಖೆಯ ಗವರ್ನ್‌ಮೆಂಟ್ ಆಫೀಷಿಯೇಟಿಂಗ್ ಸೆಕ್ರಿಟರಿ.